ಮನೆಯಲ್ಲಿ ವಾಸಿಸುವ ತನಕ ನಾನು ವಿಶ್ರಮಿಸುವುದಿಲ್ಲ. ಮತ್ತೆ ಹಿಂದೂಗಳು, ಸಿಖ್ಖರು ಕೂಡ ಸಹಜವಾಗಿಯೇ ಬಾಳುವ ಹಾಗೆ ಆಗಬೇಕು; ಎಲ್ಲ ಸಮುದಾಯಗಳೂ ಸಹೋದರರ ಹಾಗೆ ಜೀವಿಸಬೇಕು.

ಸಿಖ್ಖರ ಬಳಿ ಇರುವ 'ಕಿರ್ಪಾಣ್' (ಸಿಖ್ಖರ ಪವಿತ್ರ ಸಣ್ಣ ಕಠಾರಿ) ಪವಿತ್ರವಾದದ್ದು; ಅದನ್ನು ಅವರು ಅಸಹಾಯಕರ ಹಾಗು ದುರ್ಬಲರ ರಕ್ಷಣೆಗೋಸ್ಕರ ಬಳಸಬೇಕು. ಸಿಖ್ಖರ ಹತ್ತನೆಯ ಮತ್ತು ಕೊನೆಯ ಗುರು ಗೋವಿಂದ ಸಿಂಗ್ ಕಿರ್ಪಾಣ್ ಇಟ್ಟುಕೊಂಡಿದ್ದರು. ಆದರೆ ದುರ್ಬಲರನ್ನು ಮಟ್ಟ ಹಾಕುವುದಕ್ಕೆ ಅವರು ಯಾವತ್ತೂ ಅದನ್ನು ಬಳಸಲಿಲ್ಲ. ತಮಗೆ ತಾವೇ ಎಷ್ಟೋ ನಿರ್ಬಂಧಗಳನ್ನು ಅವರು ಹಾಕಿಕೊಂಡಿದ್ದರು. ಗುರು ಗೋಬಿಂದ್ ಸಿಂಗರಿಗೆ ಎಷ್ಟೋ ಮುಸ್ಲಿಂ ಶಿಷ್ಯಂದಿರಿದ್ದರು. ಹಾಗಯೇ ಗುರು ನಾನಕ್ ಸಾಹೇಬರಿಗೂ ಇನ್ನಿತರ ಸಿಖ್ ಗುರುಗಳಿಗೂ ಮುಸ್ಲಿಂ ಶಿಷ್ಯಂದಿರಿದ್ದರು. ನಿಮ್ಮ ಧೈರ್ಯ, ತಾಕತ್ತು ಯಾವಾಗ ಪರೀಕ್ಷೆಗೆ ಒಳಪಡುತ್ತದೆ ಅಂದರೆ, ಮುಸ್ಲಿಮರನ್ನೂ ಒಳಗೊಂಡಂತೆ ಎಲ್ಲ ಪಂಗಡದವರೂ ನಿಮ್ಮ ನಿಷ್ಠಾವಂತ ಸ್ನೇಹಿತರಾದಾಗ ಮಾತ್ರ.

ಒಂದು ಅಲ್ಪಸಂಖ್ಯಾತ ಸಮುದಾಯ ಎಷ್ಟೇ ಚಿಕ್ಕದಿರಲಿ, ತನ್ನ ನೆಚ್ಚಿನ ವಸ್ತುಗಳನ್ನು ಮತ್ತು ಅದರ ಬಗೆಗಿನ ಆತ್ಮಗೌರವವನ್ನು ಇಟ್ಟುಕೊಳ್ಳುವುದಕ್ಕೆ ಭಯ ಬೀಳಬಾರದು. ಒಬ್ಬ ಮನುಷ್ಯನಿಗೆ ತನ್ನ ಸೃಷ್ಟಿಕರ್ತನ ಅರಿವಿದ್ದರೆ, ಹಾಗೂ ಆ ಸೃಷ್ಟಿಕರ್ತನ ಪ್ರತಿರೂಪ ತಾನು ಎನ್ನುವುದು ಗೊತ್ತಾದರೆ, ಈ ಭೂಮಿಯ ಮೇಲೆ ಇರುವ ಯಾವ ಶಕ್ತಿಯೂ ಆ ವ್ಯಕ್ತಿಯ ಸ್ವ–ಮರ್ಯಾದೆಯನ್ನು ಕಿತ್ತುಕೊಳ್ಳಲಿಕ್ಕೆ ಆಗುವುದಿಲ್ಲ. ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲಿನ ಒಂದು ಬಲಿಷ್ಠ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಒಬ್ಬ ಆತ್ಮೀಯ ಇಂಗ್ಲಿಷ್ ಸ್ನೇಹಿತ ಹೇಳಿದ್ದ– 'ನನಗೆ ಅಲ್ಪಸಂಖ್ಯಾತರ ಜೊತೆ ಇರುವುದಕ್ಕೆ ಇಷ್ಟ, ಯಾಕೆಂದರೆ ಒಂದು ಅಲ್ಪಸಂಖ್ಯಾತ ಸಮುದಾಯ ಸಾಮಾನ್ಯವಾಗಿ ತಪ್ಪು ಮಾಡುವುದಿಲ್ಲ. ತಪ್ಪು ಮಾಡಿದರೂ ತಿದ್ದಿಕೊಳ್ಳಬಹುದು. ಆದರೆ, ಬಹುಸಂಖ್ಯಾತರಿಗೆ ಅಧಿಕಾರದ ಅಮಲು ಏರಿದರೆ ಅವರನ್ನು ತಿದ್ದುವುದು ಭಾಳ ಕಷ್ಟ. ಅಲ್ಪಸಂಖ್ಯಾತ ಸ್ಥಾನದ ಬೆಲೆಯನ್ನು ಭಾರತದ ಮುಸ್ಲಿಮರು ಅರಿತುಕೊಂಡರೆ ಇಸ್ಲಾಂ ಧರ್ಮದ ಅದ್ಭುತಗಳನ್ನು ಮುಸ್ಲಿಮರು ತಮ್ಮದೇ ರೀತಿಯಲ್ಲಿ ತೋರಿಸಬಹುದು. ಅವರು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಅಂದರೆ, ಇಸ್ಲಾಮಿನ ಅದ್ಭುತ ದಿನಗಳು ಪ್ರವಾದಿ ಮಹಮ್ಮದರ ಸಮುದಾಯ ಮೆಕ್ಕಾದಲ್ಲಿ ಒಂದು ಅಲ್ಪಸಂಖ್ಯಾತ ಸಮುದಾಯ ಆಗಿದ್ದ ಕಾಲದವು ಎಂಬುದನ್ನು.

ಕ್ರಿಸ್‌ಮಸ್‌ನ ಸಂದರ್ಭದಲ್ಲಿ... ಭಾರತದಲ್ಲಿನ ಮತ್ತು ಹೊರದೇಶಗಳಲ್ಲಿನ ಕ್ರಿಶ್ಚಿಯನ್ನರಿಗೆ ಶುಭ ಹಾರೈಸುತ್ತ ನಾನು ಹೇಳುವ ಮಾತು ಏನೆಂದರೆ, ಅವರೆಲ್ಲ ಸ್ವ–ನಿಯಂತ್ರಣ ಸಾಧಿಸಬೇಕು ಹಾಗೂ ಯೇಸುಕ್ರಿಸ್ತನ ಹಾದಿಯನ್ನು ಅನುಕರಿಸಬೇಕು. ಚರ್ಚ್ ನಮ್ಮಿಂದ ಹೊರಗಿಲ್ಲ, ಅದು ನಮ್ಮ ಒಳಗೇ ಇದೆ, ನಮ್ಮ ದೇಹವೇ ಚರ್ಚ್. ಅಲ್ಲೇ ದೇವರು ಇದ್ದಾನೆ. ಕ್ರಿಶ್ಚಿಯನ್ನರು ಚಿಂತಿಸಬೇಕಿಲ್ಲ. ಕ್ರಿಸ್ತನ ತ್ಯಾಗದ ದಾರಿಯಲ್ಲಿ ಅವರೆಲ್ಲ ಸಾಗಿದರೆ, ಅವರ ಧರ್ಮವನ್ನು ಕಿತ್ತುಕೊಳ್ಳುವುದಕ್ಕೆ ಯಾರಿಂದಲೂ ಆಗುವುದಿಲ್ಲ.

(ಗಾಂಧೀಜಿ ತಮ್ಮ ಜೀವಿತದ ಕೊನೆಯ ವರ್ಷದಲ್ಲಿ (1948) ಆಡಿದ ಮಾತುಗಳ ಸಂಗ್ರಹ. 'ಮಹಾತ್ಮ ಗಾಂಧಿ: ದಿ ಲಾಸ್ಟ್ 200 ಡೇಸ್' ಪುಸ್ತಕದಿಂದ)